

# ಬೆಳೆದ ಮರಕ್ಕೆ ಮತ್ತೆ ಎಡತಾಕಿದ ತವರಿನ ಬಳ್ಳಿ

ರಾತ್ರಿ ಮನೆಯಲ್ಲಿ ಎಲ್ಲರೂ ಸೇರಿಕೊಂಡಾಗ ಅಂಬಿಕ 'ಯಾರಿಗಾದರೂ ಹೊಲಿಗೆ ಗೊತ್ತಿದ್ದರೆ ದಯಮಾಡಿ ಬನ್ನಿ, ತಾನು ಹೊಲಿದ ಪೆಟಿಕೋಟುಗಳಿಗೆ ಬೇಡಿಕೆ ಬಂದಿದೆ, ಇನ್ನೊಂದು ವಾರದಲ್ಲಿ ನೂರು ಪೆಟಿಕೋಟ್ ಹೊಲಿದು ಕೊಡಲು ಆರ್ಡರ್ ಸಿಕ್ಕಿದೆ. ಬಂದರೆ ಬಂದವರಿಗೂ ಒಳ್ಳೆಯ ಕಮಿಷನ್ ಸಿಗುತ್ತದೆ. ನೆರಳಲ್ಲಿ ಕುಳಿತು ದುಡಿಮೆ ಮಾಡಬಹುದು' ಅಂತ ಆಸೆ ಹುಟ್ಟಿಸಿದಳು. ಇವತ್ತಿನ ಘಟನೆಯಿಂದ ಬಹಳ ನೊಂದಿದ್ದ ವೀಣಾ 'ಅಂಬಿಕ, ನನಗೆ ಹೊಲಿಗೆ ಬರಲ್ಲ, ಆದರೆ ಕಲಿತುಕೊಳ್ಳುತ್ತೇನೆ, ನಂಗೆ ಹೇಳಿ ಕೊಡುತ್ತೀಯಾ, ಮನೆಯಲ್ಲಿ ಸಣ್ಣ ಪುಟ್ಟದ್ದನ್ನು ಹೊಲಿಯುತ್ತಿದ್ದೆ, ಈಗ ಮರೆತು ಹೋಗಿದೆ, ಒಂದೆರಡು ದಿನಗಳಲ್ಲಿ ಕಲಿತು ಬಿಡುವೆ, ಬೇಡ ಅಂತ ಮಾತ್ರ ಅನ್ನ ಬೇಡ, ಈ ಬಾಳು ಯಾವ ಶತ್ರುವಿಗೂ ಬೇಡ ಕಣೆ' ಅಂತ ಗೋಳೋ ಅಂತ ಅತ್ತು ಬಿಟ್ಟಳು. ನಾಲ್ಕೈದು ಹುಡುಗರು ಅವಳನ್ನು ಕರೆದುಕೊಂಡು ಹೋಗಿದ್ದವರು ಇಡೀ ದಿನ ಚಿತ್ರಹಿಂಸೆ ಕೊಟ್ಟು ದುಡ್ಡನ್ನು ಕೂಡ ಸರಿಯಾಗಿ ಕೊಡದೆ ಅಪಹಾಸ್ಯ ಮಾಡಿ ಕೋಣೆಯೊಳಗಿನಿಂದ ಹೊರಗೆ ದಬ್ಬಿದ್ದರು. ಮನಸ್ಸು, ದೇಹ ಎರಡೂ ಗಾಸಿಗೊಂಡಿತ್ತು. ಇನ್ಯಾವತ್ತೂ ದೇಹ ಮಾರಿಕೊಳ್ಳುವ ಕೆಲಸಕ್ಕೆ ಹೋಗಬಾರದು ಅಂತ ಅನ್ನಿಸಿಬಿಟ್ಟಿತ್ತು. ಹಿಂದೆಯೂ ಇಂತಹ ಅನುಭವಗಳು ಆಗಿದ್ದವು. ಆ ಕ್ಷಣಗಳಲ್ಲಿ ಇಂತಹ ನರಕದ ಬದುಕು ಬೇಡವೆನಿಸುತ್ತಿದ್ದರೂ ಬದುಕಲು ದಾರಿ ಇಲ್ಲದೆ ಅದೇ ಕೂಪಕ್ಕೆ ಮತ್ತೆ ಮತ್ತೆ ಬೀಳುತ್ತಿದ್ದಳು. ಆದರೆ ಈಗ ಹೊಸ ಭರವಸೆ ಸಿಕ್ಕಾಗ ಬಿಡಲು ಅವಳ ಮನಸ್ಸು ಒಪ್ಪಲೇ ಇಲ್ಲ. ಸಾಧ್ಯವಿದ್ದರೆ ಈಗಲೇ ಹೋಗಿ ಹೊಲಿಗೆ ಮಿಷನ್ ತುಳಿಯಲು ಸಿದ್ಧವಿದ್ದಳು. ಎಲ್ಲರಿಂದ ಛಿ ಥೂ ಅನ್ನಿಸಿಕೊಳ್ಳದೆ ಬಿಸಿಲು ಮಳೆಯಲಿ ಬೇಯದೆ ಮರ್ಯಾದೆಯಾಗಿ ಬದುಕುವ ದಾರಿ ಕಾಣುತ್ತಿರುವಾಗ ಬಿಟ್ಟು ಮೂರ್ಖಳಾಗಲು ಅವಳು ಸಿದ್ಧಳಿರಲಿಲ್ಲ. ವರ್ಷ, ಅಂಬಿಕಾಗೂ ತಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಂತಾಗಿ ಸಮಾಧಾನದ ಉಸಿರು ಬಿಟ್ಟರು.

ಅವರ ಶ್ರಮಕ್ಕೆ ಪ್ರತಿಫಲ ಸಿಗತೊಡಗಿತ್ತು. ಹೋಟೆಲ್, ಬಟ್ಟೆ ಅಂಗಡಿ ಯಾವುದೇ ಸಮಸ್ಯೆ ಇಲ್ಲದೆ ನಡೆಯತೊಡಗಿತ್ತು. ಅದು ಸಂತೋಷದ ವಿಚಾರವೇ ಆದರೂ, ವರ್ಷ ಅದಷ್ಟಕ್ಕೆ ಸಮಾಧಾನ ಹೊಂದಲು ಸಿದ್ಧಳಿರಲಿಲ್ಲ. ತನ್ನಂತಹ ತಮ್ಮದಲ್ಲದ ತಪ್ಪಿಗೆ ನರಳಿ ಕೊರಗಿ ಕಷ್ಟಪಡುತ್ತಿರುವವರ ಕಣ್ಣೀರು ಒರೆಸಬೇಕು, ಅಂತಹ ಎಲ್ಲ ಜೀವಿಗಳಿಗೂ, ಸಮಾಜದಲ್ಲಿ ನಿಕೃಷ್ಟವಾಗಿ, ಕನಿಷ್ಠ ಸೌಲಭ್ಯವೂ ಇಲ್ಲದೆ ಬದುಕುತ್ತಿರುವವರು ಮರ್ಯಾದೆಯಿಂದ ಎರಡು ಹೊತ್ತು ಊಟ ಮಾಡಿ ನೆಮ್ಮದಿಯಿಂದ ನಿದ್ರೆ ಮಾಡುವಂತಹ ಬದುಕು ಕಲ್ಪಿಸಿಕೊಡಬೇಕು. ಅದಕ್ಕಾಗಿ ಏನೇ ಕಷ್ಟವಾದರೂ, ಎಷ್ಟೇ ಹಣ ಬೇಕಾದರೂ ಅದಕ್ಕಾಗಿ ಈ ಜೀವವನ್ನು ಮುಡಿಪಾಗಿಡಬೇಕು ಅಂತ ತೀರ್ಮಾನಿಸಿಬಿಟ್ಟಿದ್ದಳು. ಆದರೆ ಅಷ್ಟೊಂದು ಹಣ ತರುವುದಾದರೂ ಹೇಗೆ ಎಂಬ ಚಿಂತೆ ದಿನೇದಿನೇ ಹೆಚ್ಚಾಗುತ್ತಲೇ ಹೋಯಿತು. ಸದ್ಯಕ್ಕೆ ಇಲ್ಲಿರುವವರಿಗೆ ಸ್ವಾವಲಂಬಿಯಾಗಿ ಬದುಕುವಷ್ಟಾದರೂ ದಾರಿ ಸಿಕ್ಕಿತ್ತಲ್ಲ ಅನ್ನೋ ನೆಮ್ಮದಿ ಒಂದೇ ಅವಳನ್ನು ಸಮಾಧಾನಿಸುತ್ತಿತ್ತು.

ದಿನಸಿ ತರಲು, ಹೊಲಿದ ಬಟ್ಟೆ ಅಂಗಡಿಗಳಿಗೆ ತಲುಪಿಸಲು ಆಟೋಗೆ ತುಂಬಾ ಹಣ ಖರ್ಚಾಗುತ್ತಿದೆ ಅನಿಸಿ, ಒಂದು ಸೆಕೆಂಡ್ ಹ್ಯಾಂಡ್ ಕಾರು ತಗೊಂಡ್ರೆ ತುಂಬಾ ಅನುಕೂಲವಾಗುತ್ತೆ ಅಂತ ಅಂದುಕೊಂಡು ವರ್ಷ ಎಲ್ಲರತ್ರ ಚರ್ಚಿಸಿದಳು. ಆದರೆ ಅಷ್ಟು ಹಣ ಎಲ್ಲಿಂದ ತರೋದು, ಈಗಲೇ ಬೇಡ, ಇನ್ನೂ ಸ್ವಲ್ಪ ದಿನ ಕಳೆಯಲಿ ಮುಂದೆ ಯೋಚನೆ ಮಾಡೋಣ ಅಂತ ವರ್ಷಳನ್ನು ತಡೆದರು.